

# ಹನುಮನ ರನ್ ವಿಹಾರ

■ ವಿಶಾಖ ಎನ್.

**ಮುನ್ನುಗ್ಗಿ ಆಡುವ ಜಮಾನದಲ್ಲಿ ಬ್ಯಾಕ್ ಫುಟ್ ತಂತ್ರ ನೆಚ್ಚಿಕೊಂಡ ಹೈದರಾಬಾದ್ ಹುಡುಗ ಹನುಮ ವಿಹಾರಿ ಕಣ್ಣು ಕೀಲಿಸಿ ಜನ ನೋಡುವಂತೆ ಟೆಸ್ಟ್ ಕ್ರಿಕೆಟ್ ಆಡಿದ್ದಾರೆ. ಸಂಯಮವನ್ನು ತಲೆಯಲ್ಲಿಟ್ಟುಕೊಂಡಿರುವ ಅವರು ಈಗ ಕುತೂಹಲದ ಬಿಂದು.**

'ನನ್ನ ಪ್ರತಿ ಟೆಸ್ಟ್ ಪಂದ್ಯವೂ ಕೊನೆಯದ್ದೇ ಆಗಬಹುದು. ಹಾಗೆಂದುಕೊಂಡೇ ಆಡಲು ಇಳಿಯುವೆ.'

ಆಂಧ್ರಪ್ರದೇಶದ ಬ್ಯಾಟ್ಸ್‌ಮನ್ ಹನುಮ ವಿಹಾರಿಯ ಈ ಮಾತು ಕ್ರಿಕೆಟ್‌ನಲ್ಲಿ ಕೂಡ ಭದ್ರತಾ ವಾತಾವರಣ ಇರಲಾರದು ಎನ್ನುವುದನ್ನು ಸೂಕ್ಷ್ಮವಾಗಿ ಹೇಳುತ್ತದೆ. 25 ವರ್ಷದ ಹನುಮ ವೆಸ್ಟ್‌ಇಂಡೀಸ್ ವಿರುದ್ಧ ಇತ್ತೀಚೆಗೆ ನಡೆದ ಎರಡು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿ ಗಮನ ಸೆಳೆದರು. 291 ರನ್‌ಗಳ ಅವರ ಇನಿಂಗ್ಸ್‌ಗಳು ವೆಸ್ಟ್ ಇಂಡೀಸ್ ತಂಡದ ಕೀಮರ್ ರೋಚ್ ಬಿರುಗಾಳಿಯನ್ನು ನಿರ್ವಹಿಸಿದ ವೃತ್ತಿಪರತೆಗೆ ಕನ್ನಡಿ ಹಿಡಿದವು.

ಹನುಮ ಯಾವಾಗಲೂ ಆಂಧ್ರ ಕ್ರಿಕೆಟ್ ಸಂಸ್ಥೆ ಕೊಟ್ಟ ಬೆಂಬಲವನ್ನು ಸ್ಮರಿಸುತ್ತಾ ಇರುತ್ತಾರೆ. 60 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ ನಂತರ ದೇಶವನ್ನು ಪ್ರತಿನಿಧಿಸುವ ಅವಕಾಶ ಅವರಿಗೆ ದೊರೆತದ್ದು. ವರ್ಷಗಳ ಕಾಲ ಹರಿಸಿದ ಬೆವರು ಕೊನೆಗೊಂದು ದಿನ ಅವಕಾಶದ ದಿಡ್ಡಿ ಬಾಗಿಲು ತೆರೆಯುತ್ತದೆ ಎನ್ನುವುದನ್ನು ಚಿಕ್ಕ ವಯಸ್ಸಿನಲ್ಲೇ ಅರಿತುಕೊಂಡರು. 75 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರ ರನ್ ಗಳಿಕೆಯ ಸರಾಸರಿ 60.30 ಇದೆ. ಇಂಥ ಸರಾಸರಿ ಇರುವ ಸಾರ್ವಕಾಲಿಕ ಶ್ರೇಷ್ಠ ದೇಸಿ ಆಟಗಾರರನ್ನೆಲ್ಲ ಪಟ್ಟಿ ಮಾಡಿದರೆ, ಅಂಥ ಹತ್ತರಲ್ಲಿ ಹನುಮ ಅವರ ಹೆಸರೂ ನಿಸ್ಸಂಶಯವಾಗಿ ಕಾಣುತ್ತದೆ.

ಮೆಲ್ಬರ್ನ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಆರಂಭಿಕ ಆಟಗಾರನಾಗುವ ಅಚ್ಚರಿಯ ಅವಕಾಶ ಹನುಮ ವಿಹಾರಿಗೆ ಸಿಕ್ಕಿತ್ತು. ಚೇತೇಶ್ವರ ಪೂಜಾರ ತರಹದ ಅನುಭವಿ ಇನ್ನೊಂದು ತುದಿಯಲ್ಲಿ ಇದ್ದುದರಿಂದ ಆಗ ದಾಳಿಕೋರ ಧೋರಣೆಯಿಂದ ಇವರು ಆಡಿದ್ದರು. ಆರಂಭಿಕ ಆಟಗಾರನಾಗಿ ಅದು ಅವರಿಗೆ ಮೊದಲ ಅನುಭವ. ಆದರೆ, ವಿಂಡೀಸ್‌ನಲ್ಲಿ ಅವರ ಯಶಸ್ಸಿಗೆ ಮುಖ್ಯ ಕಾರಣ ಹೋಂವರ್ಕ್. ವೆಸ್ಟ್ ಇಂಡೀಸ್ 'ಎ' ತಂಡದ ವಿರುದ್ಧ ಭಾರತ 'ಎ' ಆಡಿದ ಪಂದ್ಯಗಳಲ್ಲೂ ಅವರು ತಂಡವನ್ನು ಪ್ರತಿನಿಧಿಸಿದ್ದರು. ಒತ್ತಡದಲ್ಲಿ ಆಗ ಒಂದು ಶತಕ ಗಳಿಸಿದ್ದರು. ಶುಭಮನ್ ಗಿಲ್ ದ್ವಿಶತಕ ಗಳಿಸಿದ್ದೂ ಆಗಲೇ.

ಅದು ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತಾದರೂ ಅಂತರರಾಷ್ಟ್ರೀಯ ಟೆಸ್ಟ್ ಪಂದ್ಯದ ಆಟದ ಮಟ್ಟವೇ ಬೇರೆ. ಕೀಮರ್ ರೋಚ್ ಹಾಗೂ ಜೇಸನ್ ಹೋಲ್ಡರ್ ಇಬ್ಬರೂ ವೇಗ ಹಾಗೂ ವೈವಿಧ್ಯ ಬೆರೆಸಿದ ಎಸೆತಗಳನ್ನು ಪ್ರಯೋಗಿಸುತ್ತಿದ್ದರು. ವಿಂಡೀಸ್‌ನ ನೀಳಕಾಯದ ಬೌಲರ್‌ಗಳ ಶಾರ್ಟ್ ಆಫ್ ಲೆಂಗ್ತ್ ಎಸೆತಗಳಿಗೆ ಜವಾಬು ಕೊಡುವುದು ಭಾರತದ ಬ್ಯಾಟ್ಸ್‌ಮನ್‌ಗಳಿಗೆ ಯಾವತ್ತೂ ಸವಾಲೇ. ಹನುಮ ಸಂಯಮವನ್ನೇ ಮೈವೆತ್ತಂತೆ ಆಡಿದ್ದರ ಫಲ ಈಗ ಕಣ್ಣೆದುರಲ್ಲಿ ಇದೆ. ನಾಯಕ ವಿರಾಟ್ ಕೊಹ್ಲಿ ಕೂಡ ಈ ಬ್ಯಾಟ್ಸ್‌ಮನ್ ತಾಳ್ಮೆಯಿಂದ ಆಡಿದ ಪರಿಯನ್ನೇ ಕೊಂಡಾಡಿದ್ದು.

ಬದುಕೂ ಈ ಹನುಮನಿಗೆ ತಾಳ್ಮೆಯ ಪಾಠವನ್ನೇ ಕಲಿಸಿದೆ. ಹನ್ನೆರಡನೇ ವಯಸ್ಸಿನಲ್ಲೇ ಅಪ್ಪನನ್ನು ಕಳೆದುಕೊಂಡ ನತದೃಷ್ಟ. ನಂತರ ಅಮ್ಮ ತಮಗೆ ಬರುತ್ತಿದ್ದ ಪೆನ್ಷನ್‌ನಲ್ಲೇ ಜೀವನ ಸಾಗಿಸಬೇಕಿತ್ತು. ಎರಡು ವರ್ಷ ದೊಡ್ಡವಳಾದ ಅಕ್ಕನೂ ಎದುರಲ್ಲಿ ಇದ್ದುದರಿಂದ ಕ್ರಿಕೆಟ್ ಆಡುವ ಕನಸನ್ನು ನೇವರಿಸುವುದು ಕಷ್ಟವಿತ್ತು. 'ಈಗ ನಾನು ಹೈದರಾಬಾದ್‌ನಲ್ಲಿ ಮನೆ ಕಟ್ಟಿದ್ದೇನೆ. ಅಮ್ಮ ಇನ್ನು ಆರಾಮವಾಗಿ ಇರಬಹುದು' ಎನ್ನುತ್ತಾ ಹನುಮ ಕಣ್ಣಂಚಿನ ನೀರನ್ನು ಒರೆಸಿಕೊಂಡಿದ್ದರಲ್ಲಿ ಅದೆಷ್ಟೋ ಕಥೆಗಳು ಅಡಗಿವೆ.

ಹನುಮನ ಆಟದ ತಂತ್ರವನ್ನು ಗಮನಿಸಬೇಕು. ವಿಂಡೀಸ್‌ನಲ್ಲಿ ಅವರು ಬ್ಯಾಕ್ ಫುಟ್ ಆಡದ ಮೂಲಕವೇ ವೇಗಿಗಳ ಸವಾಲಿಗೆ ಜವಾಬು ಕೊಟ್ಟರು. ಸದಾ ಮುನ್ನುಗ್ಗಿ ಆಡುವ ಜಾಯಮಾನದ ಆಟಗಾರರೇ ಈಗ ಹೆಚ್ಚು. ಹೀಗಾಗಿ ಇಂಥ ತಂತ್ರ ಅನೇಕರಿಗೆ ಪಾಠವೂ ಆದೀತು. ಇದನ್ನು ಹನುಮ ಪ್ರಜ್ಞಾಪೂರ್ವಕವಾಗಿ ಕಲಿತುಕೊಂಡಿರುವುದು. ರಿಷಭ್ ಪಂತ್ ದಾಳಿಕೋರತನವೇ ಹೇಗೆ ಮುಳುವಾಯಿತೆನ್ನುವ ಇನ್ನೊಂದು ಉದಾಹರಣೆಯನ್ನೂ ನಾವು ತುಲನೆ ಮಾಡಿ ನೋಡಬೇಕು.

2012ರಲ್ಲಿ ವಿಶ್ವಕಪ್ ಗೆದ್ದ 19 ವರ್ಷದೊಳಗಿನವರ ತಂಡದಲ್ಲಿ ಹನುಮ ಇದ್ದರಷ್ಟೆ; ಅದೂ ಮಂಕಾಗಿ. ಆಗ 6 ಪಂದ್ಯಗಳಿಂದ ಅವರು ಬರೀ 71 ರನ್ ಕಲೆಹಾಕಿದ್ದರು.

ಮೊನ್ನೆ ವಿಂಡೀಸ್ ಎದುರು 42 ರನ್ ಗಳಿಸಿದ್ದಾಗ ದಿನದಾಟ ಮುಗಿದಿತ್ತು. ಆ ದಿನ ರಾತ್ರಿ ಅವರು ನಿದ್ದೆ ಮಾಡಲಿಲ್ಲ. ರಿಷಭ್ ಪಂತ್ ಔಟಾದ ಬಗೆಯೇ ಕಾಡುತ್ತಿತ್ತು. ರವೀಂದ್ರ ಜಡೇಜ ಜೊತೆಯಲ್ಲಿ ಮರುದಿನ ಹೇಗೆ ಆಡಬೇಕೆಂಬ ಗುಂಗುಹುಳ ಕೊರೆಯುತ್ತಿತ್ತು. ದೊಡ್ಡ ಇನಿಂಗ್ಸ್ ಕಟ್ಟಲೇಬೇಕು ಎಂದು ಸಂಕಲ್ಪ ಮಾಡಿದರು. ಶತಕ ಬಂತು. ಇಶಾಂತ್ ಶರ್ಮ ಅದಕ್ಕೆ ನೀಡಿದ ಸಾಥ್ ಅನ್ನೂ ಅವರು ಕೊಂಡಾಡಿದರು.

6 ಟೆಸ್ಟ್ ಪಂದ್ಯಗಳ 11 ಇನಿಂಗ್ಸ್‌ಗಳಿಂದ ಹನುಮ 456 ರನ್ ಸೇರಿಸಿದ್ದಾರೆ. 45.60 ಸರಾಸರಿಯ ಈ ಗಳಿಕೆ ಅವರ ಭವಿತವ್ಯದ ಕುರಿತು ಭರವಸೆಯನ್ನಂತೂ ಮೂಡಿಸಿದೆ. ■